'Madag masur' Project in Hirekerur taluk

33. Sri H. N. NANJE GOWDA (Arkalgud) .—

Will the Minister of State for Minor Irrigation be pleased to state :—

(*a*) whether plans and estimates were prepared for the 'Madag Masur' Project across Kumudavathi river in Hirekerur taluk in Dharwar District ; if so,

(i) the estimated cost of the project,

(ii) the number of acres that would be irrigated by the said project,

(iii) the number of villages that would be benefited by this project ;

(*b*) the compelling reason that made Government not to take up this Project so far ;

(*c*) when this project would be taken up for construction ;

(*d*) whether tenders were invited for the various construction works of the project ?

Smt. BASAVARAJESHWARI (Deputy Minister for Social Welfare and Minor Irrigation) [On behalf of SRI. A. J. DODDAMETI (Minister of State for Minor Irrigation)].—

(*a*) Yes.

(i) Rs. 3,57,500.

(ii) 2,200 acres.

(iii) Five.

(*b*) Does not arise since work has been taken up.

(*c*) Does not arise in view of the reply to (*b*).

(*d*) Yes.

Sri H. N. NANJE GOWDA.—The plans and estimates of this project are revised. May I know the amount of the revised estimate ?

† ಶ್ರೀಮತಿ ಬಸವರಾಜೇಶ್ವರಿ.—ಈ ಮಾಡಿಯುಂ ಇರಿಗೇಷನ್ ಪ್ರೊಜೆಕ್ಟ್‌ನ್ನು ಎರಡು ಹಂತದಲ್ಲಿ ಪ್ರಾರಂಭ ಮಾಡಲಾಗಿದೆ. ಸಿ. ಡಬ್ಲ್ಯು. ಪಿ. ಸಿ. ಗೆ ಕ್ಲಿಯರೆನ್ಸ್‌ಗೆ ಕಳಿಸಿದೆ. ಫಸ್ಟ್ ಸ್ಟೇಜಿನಲ್ಲಿ ರಿಮಾಡಲಿಂಗ್ ಆಫ್ ಚಾನಲ್ಸ್, ಮತ್ತು ಇಂಪ್ರೂವ್‌ಮೆಂಟ್ ಟು ಕ್ರಾಸ್ ಡ್ರೈನೇಜ್ ಕನ್ಸ್ಟ್ರಕ್ಷನ್ ಇವುಗಳ ಬಗ್ಗೆ ಪೈನರ್ ಇರಿಗೇಷನ್ನಿನವರು ಕೆಲಸ ತೆಗೆದುಕೊಂಡಿದ್ದಾರೆ. ಅದರ ಎಸ್ಟಿಮೇಟ್ ಎಷ್ಟು ಎಂಬುದನ್ನು ಈಗಾಗಲೇ ನಮೂದಿಸಲಾಗಿದೆ. ಇದರಿಂದ ಸುಮಾರು 2 ಸಾವಿರದ 200

† Indicates that remarks or speeches have not been revised by the member concerned.

ಎಕರೆ ಇರಿಗೇಟ್ ಆಗುತ್ತದೆ. ಪುನಃ ರಿವೈಸ್ ಮಾಡಲಾದ ಎಸ್ಟಿಮೇಟ್‌ನ ಅಂಕಿ ಅಂಶಗಳು ನನ್ನಲ್ಲಿ ಈಗ ಇಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಎರಡನೇ ಹಂತದ ಪ್ಲಾನ್ ಅಂಡ್ ಎಸ್ಟಿಮೇಟ್ಸ್ ತಯಾರು ಮಾಡಿದ್ದೀರಾ ?

ಶ್ರೀಮತಿ ಬಸವರಾಜೇಶ್ವರಿ.—ಪೂರ್ತಿ ಪ್ರೊಜೆಕ್ಟಿನ ಒಂದು ಸ್ಕೀಂ ತಯಾರಾಗಿ ಸುಮಾರು 21 ಸಾವಿರ ಎಕರೆ ಇರಿಗೇಟ್ ಆಗಬಹುದು. ಸುಮಾರು 49 ಹಳ್ಳಿಗಳಿಗೆ ಇದರಿಂದ ಅನುಕೂಲವಾಗುತ್ತದೆ. ಇದಕ್ಕೆ ಒಂದು ಕೋಟಿ 44 ಲಕ್ಷ ರೂಪಾಯಿಯ ಪೂರ್ತಿ ಸ್ಕೀಂ ತಯಾರು ಮಾಡಿದ್ದಾರೆ.

†ಶ್ರೀ ಎಚ್. ಎನ್. ನಂಜೇಗೌಡ.—ಎರಡನೇ ಹಂತದ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀಮತಿ ಬಸವರಾಜೇಶ್ವರಿ.—ಇದನ್ನು ಈಗಾಗಲೇ ಸಿ. ಡಬ್ಲ್ಯು. ಪಿ. ಸಿ. ಗೆ ರೆಫರ್ ಮಾಡಿದ್ದೇವೆ. ಅದರ ಕ್ಲಿಯರನ್ಸಿಗಾಗಿ ಸರ್ಕಾರ ಪದೇ ಪದೇ ಪತ್ರ ಬರೆಯುತ್ತಿದೆ. ಮೊನ್ನೆ ಎರಡು ಪತ್ರಗಳನ್ನು ಕೂಡ ಕಳಿಸಿದ್ದೇವೆ.

ಶ್ರೀ ಎ. ಆರ್. ಬದರಿನಾರಾಯಣ.—ಈ ಮದಗ ಮಾನೂರು ಯೋಜನೆಯನ್ನು ತೆಗೆದು ಕೊಳ್ಳುವಾಗ ಎಷ್ಟು ಎಕರೆ ಪ್ರದೇಶ ಮುಳುಗಡೆಗೆ ಬರುತ್ತದೆ ? ತಿಮೊಗ್ಗದ ಎಷ್ಟು ಪ್ರದೇಶ ಮುಳುಗಡೆಯಾಗುತ್ತದೆ ?

ಶ್ರೀಮತಿ ಬಸವರಾಜೇಶ್ವರಿ.—ಇದು ಎಷಯುನಗರವವರ ಕಾಲದಲ್ಲಿ ಕಟ್ಟಿರತಕ್ಕ ಕೆರೆ. ಪ್ರೊಜೆಕ್ಟ್ ಕ್ಲಿಯರೆನ್ಸ್ ಆದಮೇಲೆ 21 ಸಾವಿರ ಎಕರೆಗೆ ಅನುಕೂಲವಾಗುತ್ತದೆ. ಎಷ್ಟು ಎಕರೆ ಸಬ್‌ಮರ್ಜ್ ಆಗುತ್ತದೆಂಬುದರ ಬಗ್ಗೆ ನನ್ನ ಹತ್ತಿರ ಇಲ್ಲ. ಶಿವಮೊಗ್ಗ ಜಿಲ್ಲೆಯ ಎಷ್ಟು ಪ್ರದೇಶ ಸಬ್‌ಮರ್ಜ್ ಆಗುತ್ತದೆಂಬ ಮಾಹಿತಿಯೂ ನನ್ನಲ್ಲಿ ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಯೋಜನೆಗೆ ಈಗಾಗಲೇ ಎಷ್ಟು ಲಕ್ಷ ಖರ್ಚು ಮಾಡ ರಾಗಿದೆ ?

ಶ್ರೀಮತಿ ಬಸವರಾಜೇಶ್ವರಿ.—ಎಷ್ಟು ಖರ್ಚು ಮಾಡಿದ್ದಾರೆಂಬ ಅಂಶ ನನ್ನ ಹತ್ತಿರ ಇಲ್ಲ. ಎಂ. ಎಸ್. ಇಂಜಿನಿಯರಿಂಗ್ ಕನ್‌ಸ್ಟ್ರಕ್ಷನ್ ಕಂಪೆನಿಯವರು ಕೆಲಸ ತೆಗೆದುಕೊಂಡಿದ್ದಾರೆ. ರೀಮಾಡಲಿಂಗ್ ಆಫ್ ಚಾನಲ್, ಮತ್ತು ಕ್ರಾಸ್ ಡ್ರೈನೇಜ್ ಕೆಲಸವನ್ನು ಈಗಾಗಲೇ ಅವರಿಗೆ ಒಪ್ಪಿಸಲಾಗಿದೆ.

ಶ್ರೀ ಎನ್. ಹುಚ್ಚುಮಾಸ್ತಿಗೌಡ.—ಎರಡನೇ ಹಂತದ ಯೋಜನೆಯನ್ನು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿತ್ತೇ ? ಸೇರಿಸಿದ್ದರೆ, ಇಷ್ಟು ತ್ವರಿತವಾಗಿ ಯಾವ ಕಾರಣಕ್ಕಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀಮತಿ ಬಸವರಾಜೇಶ್ವರಿ.—ಸುಮಾರು ಒಂದು ಲಕ್ಷ ರೂಪಾಯಿ ಬಜೆಟ್ಟಿನಲ್ಲಿ ಇದಕ್ಕೆ ಒದಗಿಸ ರಾಗಿತ್ತು. ಇದು ಮಾಡಿಯಂ ಪ್ರೊಜೆಕ್ಟ್ ಆಗಿರುವುದರಿಂದ ಸಿ. ಬ್ಲ್ಯು. ಪಿ. ಸಿ ಯವರಿಗೆ ಟೆಕ್ನಿಕಲ್ ಕ್ಲಿಯರೆನ್ಸಿಗಾಗಿ ರೆಫರ್ ಮಾಡಿದ್ದೇವೆ. ಅದರಲ್ಲಿ ಕೆಲವು ಇಂಪ್ರೂವ್‌ಮೆಂಟ್ಸ್ ಮಾಡಬೇಕೆಂದು ಮೈನರ್ ಇರಿಗೇಷನ್ ಇಲಾಖೆಯವರು ತೆಗೆದುಕೊಂಡಿದ್ದಾರೆ. ನಾಲ್ಕನೇ ಪ್ಲಾನಿನಲ್ಲಿ ಸೇರಿಸ ಬೇಕು ಎಂದು ಒಂದು ಲಕ್ಷ ರೂಪಾಯಿ ಬಜೆಟಿನಲ್ಲಿ ಪ್ರೊವೈಡ್ ಮಾಡಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಕೇಂದ್ರಸರ್ಕಾರದವರು ಇದಕ್ಕೆ ಹಣ ಕೊಡುತ್ತಾರೋ ಇಲ್ಲವೋ ಎಂದು ಗೊತ್ತಿಲ್ಲ. ಅವರು ಕೊಡದಿದ್ದರೆ, ರಾಜ್ಯಸರ್ಕಾರದವರು ಹಣ ಒದಗಿಸಿ ತೆಗೆದು ಕೊಳ್ಳುತ್ತೇವೆಂದು ಭರವಸೆ ಕೊಡುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ.—ಅಲ್ಲಿಂದ ಕ್ಲಿಯರೆನ್ಸ್ ಬಂದಮೇಲೆ ಹಣದ ರಿಸೋರ್ಸಸ್ ನೋಡಿಕೊಂಡು ವಿಚಾರ ಮಾಡುತ್ತೇವೆ.

ಉಪಸಭಾಧ್ಯಕ್ಷರು.—ಈ ಪ್ರಶ್ನೆಗೆ ಸಂಬಂಧಪಟ್ಟ ಮಂತ್ರಿಯವರು ಮೈಚೆನ್ನಾಗಿಲ್ಲವೆಂದು ಪತ್ರ ಬರೆದಿದ್ದಾರೆ. So I hold over this question No. 66.